**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ</u>**
**<u>ಚನ್ನಪಟ್ಟಣ</u>**

C C No. 520/2012

CW. 1 PW.2

**ಹೆಸರು : ಎಮ್ ಹೆಚ್ ಖಾನ್**
**ತಂದೆ/ಗಂಡ : ಇಕ್ಬಾಲ್ ಖಾನ್**
**ವಯಸ್ಸು : 42 ವರ್ಷ**
**ಉದ್ಯೋಗ : ಪೋಲೀಸ್ ನಿರೀಕ್ಷಕರು ಪೋಲೀಸ್ ತರಭೇತಿ ಶಾಲೆ ಮೈಸೂರು.**
**ವಾಸ : ಮೈಸೂರು.**

ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು.
ದಂಡ ಪ್ರಕ್ರಿಯ ಸಂಹಿತೆ ಕಲಂ 299 ಅಡಿಯಲ್ಲಿ ಸಾಕ್ಷ್ಯ ವಿಚಾರಣೆ
ಮುಖ್ಯ ವಿಚಾರಣೆ ಎಪಿಪಿ ಯವರಿಂದಃ ದಿ.18.10.2019.

ನಾನು ಜೂನ್ 2009 ರಿಂದ ಸೆಪ್ಟಂಬರ್ 2012 ರವರೆಗೆ ಚನ್ನಪಟ್ಟಣದ ಪುರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.26.02.2012 ರಂದು ನಾನು ಸಂಜೆ ಸುಮಾರು 4.00 ಗಂಟೆ ಸಮಯದಲ್ಲಿ ನಾನು ಕಛೇರಿಯಲ್ಲಿದ್ದಾಗ ಬಾತ್ಮಿದಾರರಿಂದ ಬಂದ ಖಚಿತ ವರ್ತಮಾನ ಏನೆಂದರೆ ಹನಮಂತನಗರದ ಪವನ್ ಡಿಲಕ್ಸ ಲಾಡ್ಜನಲ್ಲಿ ವೇಶ್ಯಾವೇಟಿಕೆ ನಡೆಯುತ್ತಿದೆ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿದ್ದ ಮೇರೆಗೆ ನಾನು ಪ್ರಾಸಾ-1, ಚಾಸಾ-4 ರಿಂದ 8 ಮತ್ತು ಪಂಚರಾದ ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ನನ್ನ ಸಕಾರ್ರಿ ವಾಹನದಲ್ಲಿ ಹನುಮಂತ ನಗರದ ಪವನ್ ಡಿಲಕ್ಸ ಲಾಡ್ಜ್ ಗೆ ಹೋಗಿ ದಾಳಿ ಮಾಡಿದಾಗ ರೂಂ ನಂಬರ್ 10 ರಲ್ಲಿ ಶೋಭಾ ಗಂಡ ರಾಜು, ಸಿದ್ದಲಿಂಗಸ್ವಾಮಿರವರು ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದರು, ರೂಂ ನಂಬರ್ 12 ರಲ್ಲಿ ದೇವಿ ಗಂಡ ರವಿಕುಮಾರ್ ಮತ್ತು ರಾಜು ರವರು ಅನೈತಿಕ ಚಟುವಟಿಕೆಯಲ್ಲಿ

ತೊಡಗಿದ್ದರು, ರೂಂ ನಂಬರ್ 13 ರಲ್ಲಿ ಲತಾ ಗಂಡ ಕೃಷ್ಣ ಮತ್ತು ರವಿ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದರು, ಇವರುಗಳನ್ನು ವಶಕ್ಕೆ ತೆಗೆದುಕೊಂಡು, ಲಾಡ್ಜ್ ಮ್ಯಾನೇಜರ್ ಅದ ಪುಟ್ಟಹನುಮಯ್ಯನವರನ್ನು ವಶಕ್ಕೆ ತೆಗೆದುಕೊಂಡು ಸಂಜೆ 4.45 ಗಂಟೆಯಿಂದ 5.45 ಗಂಟೆಯವರೆಗ ಪಂಚರ ಸಮಕ್ಷಮ ಮಹಜರನ್ನು ಮಾಡಿರುತ್ತೆವೆ. ನಂತರ ಆರೋಪಿಗಳನ್ನು ಚನ್ನಪಟ್ಟಣದ ಪೂರ್ವ ಠಾಣೆಗೆ ಕರೆತಂದು 6.30 ಗಂಟೆಗೆ ದೂರನ್ನು, ಪಂಚನಾಮೆಯನ್ನು ಮತ್ತು ಆೊರೇಪಿತರನ್ನು ಚಾಸಾ-9 ರವರಿಗೆ ನೀಡಿರುತ್ತೇನೆ.

ನಿಪಿ-1 ನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ ಅವರ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯೇ ನಾನು ನೀಡಿದ ದೂರಾಗಿದೆ, ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**